**ಪ್ರಾಣೇಶ ಪದಾಂಭೋಜ ಸ್ಮರಣಾಸಕ್ತ ಮಾನಸ ।**

**ಜ್ಞಾನಾಧಿಗುಣ ಸಂಯುಕ್ತಂ ಗುರು ಪ್ರಾಣೇಶ ಗುರುಂ ಭಜೇ ॥**

- ತಂದೆ – ಪ್ರಾಣೇಶವಿಠ್ಠಲದಾಸರು
- ಜನ್ಮನಾಮ – ವೆಂಕಟದಾಸ
- ಪತ್ನಿ – ವರದಮ್ಮ
- ಜಗನ್ನಾಥದಾಸರ ಬಳಿ ೧೨ ವರ್ಷಕಾಲ ಸೇವೆ ಮಾಡಿದರು. ಅವರ ಸೇವಾಭಾಗ್ಯದಿಂದಲೇ ಇವರು ಉತ್ತಮ ವಿದ್ವಾಂಸರಾಗಿದ್ದರು.

- ಅಂಕಿತ – "ಗುರು ಪ್ರಾಣೇಶವಿಠ್ಠಲ" – ತಮ್ಮ ತಂದೆಯಿಂದಲೇ ಅಂಕಿತ ಪಡೆದಿದ್ದು.
- ಜಗನ್ನಾಥದಾಸರು ತಾವು ಉಪಯೋಗಿಸುತ್ತಿದ್ದ "ತಂಬೂರ"ವನ್ನು ಇವರಿಗೆ ನೀಡಿದರು

- **ದಾಸರಾದದ್ದು** – ಒಮ್ಮೆ ಇವರು ರಾಮಪುರದಲ್ಲಿ ಒಬ್ಬ ಕುಲಕರ್ಣಿಯ ಬಳಿ ಕೆಲಸ ಮಾಡುತ್ತಿದ್ದರು. ಅಲ್ಲಿಂದ ವಾಪಸ್ಸು ಬರುವಾಗ ಕುದುರೆ ಮೇಲೆ ಕುಳಿತು ಬರುತ್ತಿದ್ದರು. ದಾರಿಯಲ್ಲಿ ಒಂದು ಹುಲಿ ಇವರನ್ನು ಅಡ್ಡಗಟ್ಟಿ ಕುದುರೆ ಮೇಲೆ ಎರಗಿತು. ಆದರೆ ಇವರ ಮೇಲೆ ಏನೂ ಮಾಡಲಿಲ್ಲ. ಅಂದಿನಿಂದ ತಾವು ಮಾಡುತಿದ್ದ ಕೆಲಸವನ್ನು ಬಿಟ್ಟು ಪರಮಾತ್ಮನ ಧ್ಯಾನವನ್ನು ಆರಂಭಿಸಿದರು.
- **ಕೆಲವು ಕೃತಿಗಳು –**

**೧.ಪವನ ಸಂಭೂತಗೊಲಿದು**
**೨. ತಪ್ಪುಗಳೆಣಿಸದೆ ಎನ್ನಪ್ಪನ ಕಾಯಲಿ ಬೇಕೋ ।**
**೩.ತಂಗಿ ನೀ ಕೇಳಿದ್ಯಾ**

- **ಶಿಷ್ಯರು :-**

- ಸವದತ್ತಿ ಲಂಗೋಟಿ ದಾಸರು (ವರದೇಂದ್ರ ವಿಠಲಾಂಕಿತ)
- ಶ್ರೀಶ ಪ್ರಾಣೇಶದಾಸರು

ಗುರುಪ್ರಾಣೇಶವಿಠ್ಠಲದಾಸರ ಪ್ರಸಿದ್ಧವಾದ ಕೃತಿ –

ಪವನ ಸಂಭೂತ ಒಲಿದು ತವಕದಿ ಕಾಯಬೇಕೊ ।
ಇವನ್ಯಾರೊ ಎಂದುದಾಸೀನ ಮಾಡದಲೆನ್ನ ॥ಪ॥

ಹರಿವೇಷಧರನೆ ನರಹರಿಭಕುತರ
ಪೊರೆವುದಕ್ಕೆ ಹರಿಯಂತೆ ಒದಗುವೆಯೋ ನೀನು। ಹರಿದಾಸನು ನಾನು॥

ಕಪಿಪ ಕಪಿಯಾಜ್ಞೆಯಂತೆ ಕಪಿಲನ ಪತ್ನಿಯನ್ನು
ಕಪಿಗಳು ಹುಡುಕಿ ಮಿಡುಕಲು । ಕಾಯ್ದೆ ಆವಗಲೂ॥ (ಹನುಮಾವತಾರ ವರ್ಣನೆ)
(ಅರ್ಥ: – ಕಪಿಪ ಕಪಿಯಾಜ್ಞೆಯಂತೆ = ಕಪಿಗಳ ಒಡೆಯನಾದ ಸುಗ್ರೀವನಾಜ್ಞೆಯಂತೆ,
ಕಪಿಲ ಪತ್ನಿಯನ್ನು = ಶ್ರೀ ರಾಮನ ಪತ್ನಿಯಾದ ಸೀತಾದೇವಿಯನ್ನು)

ಅಜಸುತನ ಶಾಪದಿಂದ ಅಜಗರನಾದವನ, ಪಾದ
ರಜದಿ ಪುನೀತನ ಮಾಡಿದನೆ । ಅಜ ಪದವಿಗೆ ಬಹನೆ॥ (ಭೀಮಾವತಾರ ವರ್ಣನೆ)
(ಅರ್ಥ: ಅಜಸುತನ ಶಾಪದಿಂದ = ಬ್ರಹ್ಮನ ಮಗ ಭೃಗು ಮುನಿಗಳ ಮೂಲಕ ಅಗಸ್ತ್ಯ ಋಷಿಗಳ ನಿಮಿತ್ತವಾಗಿ,
ಶಪಿತನಾದ ನಹುಷ

ಕಲಿಯುಗದಿ ಕವಿಗಳೆಲ್ಲ ಕಲಿ ಬಾಧೆಯಿಂದ ಬಳಲೆ
ಕಲಿವೈರಿಮುನಿಯೆಂದೆನಿಸಿದೀ। ಕಲಿಮಲವಾ ಕಳೆದೀ ॥ (ಮಧ್ವಾವತಾರ ವರ್ಣನೆ)
( ಕವಿ = ಜ್ಞಾನಿಗಳು, ಕಲಿಬಾಧೆಯಿಂದ – ೨೧ ಕುಭಾಷ್ಯಗಳ ಬಾಧೆಯಿಂದ
ಕಲಿವೈರಿಮುನಿ = ೨೧ ಕುಭಾಷ್ಯ ಖಂಡಿಸಿದ ಕುಭಾಷ್ಯ ವೈರಿಯಾದ ಆಚಾರ್ಯ ಮಧ್ವರು)
ಕಲಿಮಲವಾ – ದುರ್ಮತವೆಂಬ ಕಲಿಮನವನ್ನು ಕಳೆದೀ – ದೂರಗೊಳಿಸಿದೆ.

ಗುರುಪ್ರಾಣೇಶ ವಿಟ್ಠಲನೆ ಪರಗತಿಯೆಂಬೊ ಜ್ಞಾನ
ಗುರುಮಧ್ವರಾಯ ಕರುಣಿಸೊ । ದುರ್ಮತಿಗಳ ಬಿಡಿಸೊ॥

ಶ್ರೀ ಮಧ್ವೇಶಾರ್ಪಣಮಸ್ತು